# ಘಮ ಘಮಾಡಸ್ತಾವ ಬೆಕ್ಕು..

ಚಿತ್ರ-ಲೇಖನ:
**ಸುಘೋಷ್ ಎಸ್. ನಿಗಳೆ**



ಅಂಗೈಯಲ್ಲಿ ಪುನುಗು



ಆಫ್ರಿಕನ್ ಸಿವೆಟ್

**ಯಾ**ವುದೋ ಪಾರ್ಟಿಗೆ ಹೊರಡಲು ಸಿದ್ಧರಾಗುತ್ತಿದ್ದೀರಿ. ಟಿಪ್ ಟಾಪ್ ಆಗಿ ಡ್ರೆಸ್ ಮಾಡಿಕೊಂಡ ಮೇಲೆ ಯಾವುದಾದರೂ ಘಮಘಮ ಪರ್ಫ್ಯೂಮ್ ಅಥವಾ ಬಾಡಿ ಸ್ಪ್ರೇ ಪೂಸಿಕೊಳ್ಳದಿದ್ದರೆ ಆದೀತೆ? ಥಟ್ಟನೆ, ಡ್ರೆಸ್ಸಿಂಗ್ ಟೇಬಲ್ ಮೇಲಿರುವ ಇಂಪೋರ್ಟೆಡ್ ಪರ್ಫ್ಯೂಮ್ ಅನ್ನು ಹೊಡೆದುಕೊಂಡು ಪಾರ್ಟಿಗೆ ಹೋಗುತ್ತೀರಿ. ಆದರೆ ಹಿಂದಿನ ಕಾಲದಲ್ಲಿ, ಅಂದರೆ ಈ ಪರ್ಫ್ಯೂಮು, ಬಾಡಿ ಸ್ಪ್ರೇ ಇಲ್ಲದ ಕಾಲದಲ್ಲಿ ಏನು ಮಾಡುತ್ತಿದ್ದರು?

ಚಿತ್ರದಲ್ಲಿ ಕಾಣುವ ಬಾಟಲಿಯಲ್ಲಿನ ಕಂದುಬಣ್ಣದ ಪದಾರ್ಥವನ್ನು ಲೇಪಿಸಿಕೊಳ್ಳುತ್ತಿದ್ದರು! ಇಂದಿನ ಯಾವುದೇ ಬ್ರಾಂಡಿನ ರಾಸಾಯನಿಕ ಮಿಶ್ರಿತ ಪರ್ಫ್ಯೂಮ್‌ಗಳಿಗೆ ಹೋಲಿಸಿದರೆ ಇದು ಯಾವುದಕ್ಕೂ ಕಡಿಮೆಯಿಲ್ಲ. ಹಾಗಾದರೆ ಅಂಗೈ ಮೇಲಿರುವ ಈ ಮಾಟದ ಬಾಟಲಿಯಲ್ಲೇನಿದೆ ಎಂಬ ಕುತೂಹಲವೇ?

ಸಾಮಾನ್ಯವಾಗಿ ಮಲೆನಾಡಿನ ಮಂದಿ ಅದರಲ್ಲೂ ವಿಶೇಷವಾಗಿ ಪಶ್ಚಿಮ ಘಟ್ಟಗಳ ಸಮೀಪ ವಾಸಿಸುವ ಜನರಿಗೆ 'ಪುನುಗು ಬೆಕ್ಕು' ಗೊತ್ತಿರಲೇ ಬೇಕು. ಈ ಬಾಟಲಿಯಲ್ಲಿ ಕಾಣುತ್ತಿರುವುದು ಪುನುಗು ಬೆಕ್ಕಿನ 'ಪುನುಗು.' ಈ ಪುಟ್ಟ ಬಾಟಲಿ ಹಾಗೂ ಇದರಲ್ಲಿನ ಕಂದು ಬಣ್ಣದ ಪುನುಗು ಕಾಣಸಿಕ್ಕಿದ್ದು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಕುಂಬ್ರಿ ಉಬ್ಬು ಬಳಿಯ ಸುಮಾ ಸದಾಶಿವರಾವ್ ಅವರ ಮನೆಯಲ್ಲಿ. ಸುಮಾ ಅವರಿಗೆ ಈ ಪುನುಗನ್ನು ಅವರ ಸಂಬಂಧಿಕರಾಗಿದ್ದ 90ರ ಆಸುಪಾಸಿನಲ್ಲಿದ್ದ ಅಜ್ಜಿಯೊಬ್ಬರು. 'ನಾನು ಚಿಕ್ಕವಳಾಗಿದ್ದಾಗ ನನಗೆ ಕೊಟ್ಟಿದ್ದರು' ಎಂದು ಹೇಳಿ ಕೊಟ್ಟಿದ್ದರಂತೆ. ಆ ಅಜ್ಜಿ ತೀರಿಕೊಂಡೇ ದಶಕ ಕಳೆದಿದೆ. ಅಂದರೆ ಈ ಪುನುಗಿಗೆ ಇದೀಗ 100ಕ್ಕೂ ಹೆಚ್ಚು ವರ್ಷ ವಯಸ್ಸು! ಇಷ್ಟಾದರೂ ಇದರ ಪರಿಮಳ ಮಾತ್ರ ಕೊಂಚವೂ ಕಡಿಮೆಯಾಗಿಲ್ಲ.

ಸಾಕುಬೆಕ್ಕಿಗಿಂತ ದೊಡ್ಡದಿರುವ ಪುನುಗು ಬೆಕ್ಕು 1 ರಿಂದ 3 ಅಡಿ ಉದ್ದವಿರುತ್ತದೆ. 'ವಿವಿರಿಡಿ' ಕುಟುಂಬಕ್ಕೆ ಸೇರಿದ ಪುನುಗು ಬೆಕ್ಕಿನಲ್ಲಿ ನಾಲ್ಕು ವಿಧಗಳಿವೆ. ಮೊದಲನೆಯದು ಮಲಬಾರ್ ಸಿವೆಟ್ ಅಥವಾ ದೊಡ್ಡ ಕುಂಡೆ ಬೆಕ್ಕು. ಇದನ್ನು ದೊಡ್ಡ ಚುಕ್ಕೆ ಬೆಕ್ಕು ಎಂತಲೂ ಕರೆಯುತ್ತಾರೆ. ಆದರೆ ಈ ಮಲಬಾರ್ ಸಿವೆಟ್ ಬದುಕಿದೆಯೆ ಇಲ್ಲವೇ ಎಂಬ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ ಎನ್ನುತ್ತಾರೆ ಪರಿಸರ ತಜ್ಞರಾದ ಎಮ್.ಎಸ್. ಚೈತ್ರ.

ಇನ್ನು ಲಾರ್ಜ್ ಪಾಮ್ ಸಿವೆಟ್ ಹಾಗೂ ಬ್ರೌನ್ ಪಾಮ್ ಸಿವೆಟ್ ಎಂಬುದು ಮತ್ತೆರೆಡು ವಿಧ. ಪುನುಗು ಬೆಕ್ಕು ಎಂದು ಕರೆಯಲಾಗುವ ಸ್ಮಾಲ್ ಇಂಡಿಯನ್ ಸಿವೆಟ್, ಪುನುಗನ್ನು ಉತ್ಪಾದಿಸುತ್ತದೆ. ಇದರ ಬಾಲದ ಮೇಲೆ ಕಪ್ಪು ಹಾಗೂ ಬಿಳಿ ಬಣ್ಣದ ರಿಂಗ್ಸ್ ಇರುತ್ತವೆ. ಪುನುಗು ಬೆಕ್ಕು ಭಯ ಅಥವಾ ಒತ್ತಡಕ್ಕೆ ಒಳಗಾದಾಗ ಅದರ ಹಾರ್ಮೋನುಗಳು ದೇಹದ ಹೊರಗೆ ಕಂದು ಬಣ್ಣದ ಪದಾರ್ಥವೊಂದನ್ನು ಸ್ರವಿಸುತ್ತವೆ. ಒತ್ತಡದ ಪರಿಸ್ಥಿತಿಯಲ್ಲಿ ಪುನುಗು ಬೆಕ್ಕು ಅದನ್ನು ಮರಕ್ಕೆ ಉಜ್ಜುತ್ತದೆ. ಹೀಗೆ ಉಜ್ಜಿ ಉಜ್ಜಿ ಶೇಖರಗೊಂಡ ಹಾರ್ಮೋನಿನ ಉಪ ಉತ್ಪನ್ನವೇ ಈ ಪುನುಗು. ಇದನ್ನು ಸಂಗ್ರಹಿಸಿ ಔಷಧಿ ತಯಾರಿಕೆಗೆ ಹಾಗೂ ಸೆಂಟ್‌ನಲ್ಲಿ ಪರಿಮಳದ ಅಂಶವನ್ನು ಹೆಚ್ಚು ಹೊತ್ತು ಇರಿಸಲು ಬಳಸುತ್ತಾರೆ.

ಹಿಂದಿನ ಕಾಲದಲ್ಲಿ ಔಷಧಕ್ಕಾಗಿಯೇ ಮನೆಯಲ್ಲಿ ಇವುಗಳನ್ನು ಸಾಕುವ ಪರಿಪಾಠವಿತ್ತು. ಅಟ್ಟದ ಮೇಲೆ ಪುನುಗು ಬೆಕ್ಕನ್ನು ಒಂದು ಕಡೆ ಕಟ್ಟಿ ಹಾಕಿ ಮರದ ತುಂಡನ್ನು ಇಟ್ಟಿರುತ್ತಿದ್ದರು. ಪುನುಗು ಬೆಕ್ಕು ಭಯ ಅಥವಾ ಒತ್ತಡಕ್ಕೆ ಒಳಗಾದಾಗಲೆಲ್ಲ ಅಲ್ಲಿ ಇಟ್ಟಿರುತ್ತಿದ್ದ ಮರದ ತುಂಡಿಗೆ ಮೈಯನ್ನು ತಿಕ್ಕುತ್ತಿತ್ತು. ಈ ರೀತಿ ಪುನುಗನ್ನು ಸಂಗ್ರಹಿಸುತ್ತಿದ್ದರು.

ಪುನುಗು ಹಾಗೂ ಪುನುಗು ಬೆಕ್ಕಿನ ಮತ್ತೊಂದು ಪ್ರಬೇಧವಾದ 'ಟಾಡಿ ಕ್ಯಾಟ್'ನ ವೃಷಣಗಳಿಂದ ಕಾಮಪ್ರಚೋದಕ ಔಷಧಿ ತಯಾರಿಕೆಗೆ ಭಾರೀ ಬೇಡಿಕೆ ಕಂಡುಬಂದಿದ್ದು ಇವುಗಳ ಸಂತತಿ ಅಳಿವಿನಂಚಿನಲ್ಲಿದೆ. ನಿಶಾಚಾರಿಯಾಗಿರುವ ಪುನುಗು ಬೆಕ್ಕುಗಳು ಕೆಲವೊಮ್ಮೆ ನಾಡಿಗೆ ಭೇಟಿ ಕೊಟ್ಟು ಪೇಚಿಗೆ ಸಿಲುಕಿಕೊಂಡಿರುವ ಘಟನೆಗಳಿಗೇನೂ ಕೊರತೆಯಿಲ್ಲ. ಮನುಷ್ಯನ ದುರಾಸೆಯಿಂದ ಪುನುಗು ಬೆಕ್ಕಿನ ಸಂತತಿಯನ್ನು ರಕ್ಷಿಸುವ ಅವಶ್ಯಕತೆ ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ.